OCTOBER 12, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಕರ್ನಾಟಕ ಅಂಚೆ ವೃತ್ತ,** ರಾಷ್ಟ್ರೀಯ ಅಂಚೆ ಸಪ್ತಾಹದ ಅಂಗವಾಗಿ ಆಯೋಜಿಸಿರುವ, ಅಂಚೆ ಚೀಟಿ ಸಂಗ್ರಹ–ಫಿಲಾಟೆಲಿ ಪಾಸಪೋರ್ಟ್ ಮಾರಾಟಕ್ಕೆ ಹೆಚ್ಚಿನ ಬೇಡಿಕೆ ಬಂದಿದೆ. ಎರಡು ದಿನಗಳಲ್ಲಿ ರಾಜ್ಯಾದ್ಯಂತ 8 ಸಾವಿರ ಫಿಲಾಟೆಲಿ ಪಾಸಪೋರ್ಟ್‌ಗಳು ಮಾರಾಟವಾಗಿವೆ. ಫಿಲಾಟೆಲಿ ಪಾಸಪೋರ್ಟ್ ಪ್ರವಾಸ ಕೋಶವಾಗಿದ್ದು, ಇದನ್ನು ಖರೀದಿಸಿದವರು, ರಾಜ್ಯ ಸುತ್ತಿ ಪ್ರಯಾಣದ ದಾಖಲೆಯೊಂದಿಗೆ, ಪ್ರವಾಸದ ಪ್ರಯೋಜನ ಪಡೆಯಬಹುದು ಎಂದು ಕರ್ನಾಟಕ ಅಂಚೆ ವೃತ್ತದ ನಿರ್ದೇಶಕ ಸಂದೇಶ ಮಹದೇವಪ್ಪ ತಿಳಿಸಿದ್ದಾರೆ.

<><><>

**ಮೈಸೂರು ದಸರಾ ಪ್ರಯುಕ್ತ, ಅರಮನೆ ಆವರಣದಲ್ಲಿ** ಆಯೋಜಿತ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಉದ್ಘಾಟಿಸಿದರು. ಹಿರಿಯ ಶಾಸ್ತ್ರೀಯ ಸಂಗೀತ ಗಾಯಕಿ ಹಾಗೂ ಸಾಹಿತಿ ಡಾಕ್ಟರ ನಾಗಮಣಿ ಶ್ರೀನಾಥ್ ಅವರಿಗೆ 'ಸಂಗೀತ ವಿದ್ವಾನ್' ಪ್ರಶಸ್ತಿ ನೀಡಿ ಗೌರವಿಸಲಾಯಿತು.

<><><>

**ಮೈಸೂರು ದಸರಾ ಮಹೋತ್ಸವದ ಪ್ರಮುಖ** ಆಕ ರ್ಷಣೆಯಾಗಿರುವ, ವಿದ್ಯುತ್ ದೀಪಾಲಂಕಾರಕ್ಕೆ ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ಚಾಲನೆ ನೀಡಿದರು.

<><><>

**ಮೈಸೂರು, ಚಾಮುಂಡಿ ವಿಹಾರ ಒಳಾಂಗಣ** ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ದಸರಾ ಕ್ರೀಡಾಕೂಟ 'ಸಿಎಂ ಕಪ್–2026' ಕ್ಕೆ, ಕ್ರೀಡಾ ಖಾತೆ ಸಚಿವ ಹಾಗೂ ಉಪ ಮುಖ್ಯಮಂತ್ರಿ ಡಾಕ್ಟರ ಜಿ.ಪರಮೇಶ್ವರ ಚಾಲನೆ ನೀಡಿದರು. ಈ ಸಂದರ್ಭ ಮಾತನಾಡಿದ ಅವರು, ನಾಡಹಬ್ಬ ಮೈಸೂರು ದಸರಾ ಪ್ರಯುಕ್ತ ಆಯೋಜಿಸಿರುವ ದಸರಾ ಕ್ರೀಡಾಕೂಟಕ್ಕೆ ಸರ್ಕಾರ ರಾಜ್ಯಮಟ್ಟದ ಮಾನ್ಯತೆ ನೀಡಿದೆ ಎಂದರು.

<><><>

**ಮೈಸೂರು ದಸರಾ ಜಂಬೂಸವಾರಿಯಲ್ಲಿ** ಪಾಲ್ಗೊಳ್ಳುವ, ಗಜಪಡೆ ಹಾಗೂ ಕುದುರೆಗಳಿಗೆ, ಇಂದು 3 ನೇ ಹಂತದ ಕುಶಾಲತೋಪು ಸಿಡಿಸುವ ತಾಲೀಮು ಯಶಸ್ವಿಯಾಗಿ ಜರುಗಿತು. ತಾಲೀಮಿನಲ್ಲಿ 11 ಆನೆಗಳು ಹಾಗೂ 43 ಕುದುರೆಗಳು ಇದ್ದವು.

<><><>

**ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು,** ಬೆಳಗಾವಿ ವಿಭಾಗ ಮಟ್ಟದ ಪವಾಡ ರಹಸ್ಯ ಬಯಲು ತರಬೇತಿ ಶಿಬಿರವನ್ನು ಘಟಪ್ರಭಾದ ಡಾಕ್ಟರ ಹರ್ಡೀಕರ ಸೇವಾದಳ ನ್ಯಾಶನಲ್ ಅಕಾದೆಮಿಯಲ್ಲಿ ಆಯೋಜಿಸಿತು. ಬೆಳಗಾವಿ ಶೈಕ್ಷಣಿಕ ವಿಭಾಗದ, ಒಟ್ಟು ಹತ್ತು ಜಿಲ್ಲೆಗಳ 120 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಡಾಕ್ಟರ ಹುಲಿಕಲ್ ನಟರಾಜ್ . .

<><><>

**ಡಾಕ್ಟರ ಹುಲಿಕಲ್ ನಟರಾಜ ಧ್ವನಿ– 41 ಸೆಕೆಂದುಗಳು**

<><><>

**ಹೊಸದಿಲ್ಲಿಯ ಕೃಷಿ ಭವನದಲ್ಲಿ, ಈ ಮಧ್ಯಾಹ್ನ** 3 ಗಂಟೆಗೆ, ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸಬೇಕು ಎಂಬ ಬೇಡಿಕೆ ಕುರಿತು ಕೇಂದ್ರ ಸಚಿವರ ಸಮ್ಮುಖದಲ್ಲಿ ಸಮಾಲೋಚನ ಸಭೆ ಆಯೋಜಿತವಾಗಿದೆ. ಸಭೆಯಲ್ಲಿ ಪಾಲ್ಗೊಳ್ಳಲು ಬೆಳಗಾವಿಯಿಂದ ಸುಮಾರು 35 ಜನ, ರೈತ ಮುಖಂಡರು ಹೊಸದಿಲ್ಲಿಗೆ ಪ್ರಯಾಣಿಸಿದ್ದಾರೆ. ಕರ್ನಾಟಕ ಹಾಗೂ ಮಹಾರಾಷ್ಟ್ರದ ವಿವಿಧ ಜಿಲ್ಲೆಗಳ ಒಟ್ಟು 54 ಜನ ರೈತ ಮುಖಂಡರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಸಾರ್ವಜನಿಕ ಸೇವೆಯಲ್ಲಿ, ಸಾರ್ಥಕ 25 ವ ೯ಗಳನ್ನು ಪೂರ್ಣಗೊಳಿಸಿದ್ದಾರೆ. 'ಜನ ಸೇವೆಯಿಂದ ದೇಶ ಸೇವೆ' ಎಂಬ ಅಭಿಯಾನವನ್ನು ದೇಶಾದ್ಯಂತ ಆಯೋಜಿಸಲಾಗಿದೆ. ಆಕಾಶವಾಣಿಯ, ಇಂದಿನ ವಿಶೇ ಸರಣಿಯಲ್ಲಿ, 'ಸಾಗರಮಾಲಾ ಯೋಜನೆ' ಕುರಿತು, ಒಂದು ನೋಟ.. ಭಾರತದ ಸುದೀರ್ಘ ಕರಾವಳಿ ತೀರವನ್ನು, ದೇಶದ ಆರ್ಥಿಕ ಪ್ರಗತಿಯ ಚಾಲಕ ಶಕ್ತಿಯಾಗಿ ಪರಿವರ್ತಿಸುವ ಉದ್ದೇಶದಿಂದ, 2015ರಲ್ಲಿ, 'ಸಾಗರಮಾಲಾ ಯೋಜನೆ'ಗೆ ಚಾಲನೆ ನೀಡಲಾಯಿತು. ಇದು ಬಂದರು, ಉತ್ಪಾದನಾ ಕೇಂದ್ರ, ಮಾರುಕಟ್ಟೆ ಹಾಗೂ ಸಾರ್ವಜನಿಕರನ್ನು, ಯಶಸ್ವಿಯಾಗಿ ಸಂಪರ್ಕಿಸುತ್ತಿದೆ. ಯೋಜನೆಯಡಿ ಇದು ವರೆಗೆ 6 ದಶಾಂಶ 6 ಲಕ್ಷ ಕೋಟಿ ರೂಪಾಯಿ ಮೌಲ್ಯದ, 845ಕ್ಕೂ ಹೆಚ್ಚು ಯೋಜನೆಗಳನ್ನು ರೂಪಿಸಲಾಗಿದೆ. ಆ ಪೈಕಿ 315 ಯೋಜನೆಗಳನ್ನು, ಪೂರ್ಣಗೊಳಿಸಲಾಗಿದೆ.

<><><>

**ರಾಯಚೂರು ಜಿಲ್ಲೆ, ಗಣೇಕಲ್ ಜಲಾಶಯದಿಂದ,** ನಗರದ ಕೆಳಭಾಗದ ಪ್ರದೇಶಗಳಿಗೆ ಕುಡಿಯುವ ನೀರಿನ ಬೇಡಿಕೆ ಹಾಗೂ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ನೀರು ಪೂರೈಸಲಾಗುತ್ತಿದೆ ಎಂದು ಶಾಸಕ ಬಸನಗೌಡ ದದ್ದಲ್ ತಿಳಿಸಿದ್ದಾರೆ.

<><><>

**ಕರ್ನಾಟಕ ಜಾನಪದ** ಪರಿಷತ್ತು ಕೊಡಮಾಡುವ, ಲೋಕಸಿರಿ ಗೌರವ ಪ್ರಶಸ್ತಿಗೆ ಭಾಜನರಾದ, ಜಾನಪದ ಸಂಶೋಧಕ ಹಾಗೂ ಕಲಾವಿದ ಹುಬ್ಬಳ್ಳಿಯ ಡಾಕ್ಟರ ರಾಮು ಮೂಲಗಿ ಅವರಿಗೆ, ರಾಮನಗರದ ಜಾನಪದ ಲೋಕದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ, ಪರಿಷತ್ತಿನ ಅಧ್ಯಕ್ಷ ಹಿ.ಚಿ ಬೋರಲಿಂಗಯ್ಯ ಪ್ರಶಸ್ತಿ ಪ್ರದಾನ ಮಾಡಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>